



# ಎದೆಯಿಂದ ಎದೆಗೆ...

ತನ್ನತ್ತ ನೋಡುತ್ತಿರುವ ಮಗುವನ್ನು ನೋಡಿ ಎದೆಯನ್ನು ಕೈಯಿಂದ ಮುಚ್ಚಿಕೊಂಡಿರುವ ಹೆಣ್ಣಿನ ಚಿತ್ರಪಟವನ್ನು ಗಮನಿಸಿ. ಈ ಚಿತ್ರ ಸಾವಿರ ಕಥೆಗಳನ್ನು ಹೇಳುವಂತಿದೆ. ಆ ಹೆಣ್ಣುಮಗಳ ಕಣ್ಣುಗಳಲ್ಲಿ ಇಣುಕಿ ನೋಡುವುದು ಸಾಧ್ಯವಾದರೆ, ಅಲ್ಲಿ ನೋವಿನ ಮಡುವನ್ನೇ ಕಾಣಬಹುದೇನೊ?

ಸ್ತನ ಕ್ಯಾನ್ಸರ್‌ನಿಂದಾಗಿ ಅಂಗಛೇದನಕ್ಕೊಳಗಾದ ಹೆಣ್ಣುಮಕ್ಕಳ ತವಕತಲ್ಲಣಗಳನ್ನು ಬಿಂಬಿಸುವ ಕಲಾಪ್ರದರ್ಶನವೊಂದು ಇತ್ತೀಚೆಗೆ ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆಯಿತು. ಪ್ರಸಿದ್ಧ ಕಲಾವಿದ ಪೀಟರ್ ಪಾಲ್ ರೂಬೆನ್ಸ್‌ನ ‘ವೀನಸ್ ಮತ್ತು ಕ್ಯುಪಿಡ್’ನ ಕಲಾಕೃತಿಯ ಪ್ರತಿಕೃತಿ ಸೇರಿದಂತೆ, ಹಲವು ಕಲಾವಿದರ ಸೃಜನಶೀಲ ಬಿಂಬಗಳನ್ನು ಬಳಸಿಕೊಂಡು ಈ ಪ್ರದರ್ಶನವನ್ನು ರೂಪಿಸಲಾಗಿತ್ತು. ಆ ಪ್ರದರ್ಶನದಲ್ಲಿನ ಚಿತ್ರಗಳು ಕಾಲ–ದೇಶಗಳನ್ನು ಮೀರಿ ಮಾನವೀಯತೆಯ ಪಾಠವೊಂದನ್ನು ಎದೆಯಿಂದ ಎದೆಗೆ ದಾಟಿಸಲು ಹಂಬಲಿಸುವಂತಿದ್ದವು.

ಸ್ತನಗಳು ಹೆಣ್ಣಿನ ಸೌಂದರ್ಯದ ಲಕ್ಷಣ ಮಾತ್ರವಲ್ಲ, ಮಾತೃತ್ವದ ಸಂಕೇತವೂ ಹೌದು. ತಾಯಿ ಮತ್ತು ಮಗುವಿನ ನಡುವೆ ಪ್ರೀತಿಯ ಸಂವಹನಕ್ಕೆ ಎದೆಯೇ ಸೇತುವೆ. ಇಂಥ ಪ್ರೇಮದ–ಸೌಂದರ್ಯದ ರೂಪವಾದ ದೇಹದ ಭಾಗವನ್ನು ರೋಗದ ಕಾರಣಕ್ಕಾಗಿ ಕಳೆದುಕೊಳ್ಳುವುದು ಯಾವುದೇ ಹೆಣ್ಣಿನ ಪಾಲಿಗಾದರೂ ಆಘಾತವನ್ನುಂಟು ಮಾಡುತ್ತದೆ. ಆದರೆ, ಕ್ಯಾನ್ಸರ್ ತೀವ್ರಗೊಂಡ ಸಂದರ್ಭದಲ್ಲಿ ಸ್ತನಛೇದನ ಅನಿವಾರ್ಯ. ಹೀಗೆ ಅಂಗಛೇದನಕ್ಕೊಳಗಾದ ಹೆಣ್ಣುಮಕ್ಕಳು ನೋವಿನ ಜೊತೆಗೆ ಕೀಳರಿಮೆಯಿಂದಲೂ ಬಳಲುತ್ತಾರೆ. ಆ ನೋವಿಗೆ ಸಹೃದಯತೆಯಿಂದ ಸ್ಪಂದಿಸುವವರು, ಅವರನ್ನು ಸಹಾನುಭೂತಿಯಿಂದ ನಡೆಸಿಕೊಳ್ಳುವವರು ಇದ್ದಾಗ ದೈಹಿಕ ಬಾಧೆ ಮನಸ್ಸಿಗೂ ಅಂಟದಂತೆ ತಡೆಗಟ್ಟುವುದು ಸಾಧ್ಯವಾಗುತ್ತದೆ.



ಮ್ಯಾಡ್ರಿಡ್‌ನಲ್ಲಿ ನಡೆದ ಪ್ರದರ್ಶನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವ ಉದ್ದೇಶ ಹೊಂದಿತ್ತು. ಇಂಥ ಪ್ರದರ್ಶನಗಳು ಎಲ್ಲೆಡೆಯೂ ನಡೆಯಬೇಕು. ಸ್ತನ ಕ್ಯಾನ್ಸರ್‌ನ ಕುರಿತು ಜಾಗೃತಿ ಮೂಡಿಸುವ ಕೆಲಸ ನಡೆಯಬೇಕು. ಮುಖ್ಯವಾಗಿ, ಅಂಗಛೇದನಕ್ಕೊಳಗಾದ ಮಹಿಳೆಯರನ್ನು ಸಹಾನುಭೂತಿಯಿಂದ, ಪ್ರೇಮದಿಂದ ನಡೆಸಿಕೊಳ್ಳುವ ಮನಸ್ಥಿತಿಯನ್ನು ಸಮಾಜ ರೂಢಿಸಿಕೊಳ್ಳಬೇಕು.

ಅಂಗವೊಂದನ್ನು ಕಳೆದುಕೊಳ್ಳುವುದರಿಂದ ದೇಹ ವಿಕಾರಗೊಳ್ಳುವುದಿಲ್ಲ; ಆ ಅಂಗದ ಕೊರತೆಯ ಕುರಿತು ಲೇವಡಿ, ಆಡಿಕೊಳ್ಳುವುದು ಮಾನಸಿಕ ವಿಕಾರ. ಅಂಥ ವಿಕಾರವನ್ನು ನೀಗಿಕೊಳ್ಳುವ ದಾರಿಯನ್ನು ಕಲೆ ನಮಗೆ ಕರುಣಿಸುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**